# ನಿವೇದನೆ

## ಸರ್ಕಾರಿ ವೈದ್ಯರ ಮುಷ್ಕರ; ಬಡ ವರ್ಗ ತತ್ತರ

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ವೈದ್ಯರು ಮಾರ್ಚ್ 11ರಿಂದ 15ರವರೆಗೆ ಒಪಿಡಿ ಸೇವೆ ಬಂದ್ ಮಾಡಲಿದ್ದಾರೆ. ದುಬಾರಿ ಶುಲ್ಕಕ್ಕೆ ಅಂಜಿ ಖಾಸಗಿ ಆಸ್ಪತ್ರೆಗೆ ಹೋಗಲು ಹಿಂದೇಟು ಹಾಕುವ ಬಡವರು ಸರ್ಕಾರಿ ಆಸ್ಪತ್ರೆಯನ್ನೇ ನೆಚ್ಚಿಕೊಂಡಿದ್ದಾರೆ. ಈಗ ಒಪಿಡಿ ಬಂದ್ ಮಾಡಿದರೆ ಬಡ ವರ್ಗ ಎಲ್ಲಿಗೆ ಹೋಗಬೇಕು?



ವಿಜಯ

ವರ್ಗಾವಣೆ ನೀತಿ ಬದಲಾವಣೆ, ಖಾಲಿ ಹುದ್ದೆಗಳ ಭರ್ತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸರ್ಕಾರಿ ವೈದ್ಯರು ಮಾರ್ಚ್ 11ರಿಂದ 15ರವರೆಗೆ ಹೊರರೋಗಿಗಳ (ಒಪಿಡಿ) ಸೇವೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲು ತೀರ್ಮಾನಿಸಿರುವುದು ಬಡವರ್ಗಕ್ಕೆ ನುಂಗಲಾರದ ತುಪ್ಪವಾಗಿ ಪರಿಣಮಿಸಲಿದೆ. ಕಾಂಗ್ರೆಸ್ ಸರ್ಕಾರದ ವಿರುದ್ಧ ವೈದ್ಯರು ಒಪಿಡಿ ಬಂದ್ ಮಾಡಿ ಹೋರಾಟಕ್ಕೆ ಇಳಿಯುವುದು, ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆಯನ್ನೇ ನೆಚ್ಚಿಕೊಳ್ಳುತ್ತಿರುವ ಬಡವರಿಗೆ ಖಾಸಗಿ ಆಸ್ಪತ್ರೆಗೆ ತೆರಳುವ ಪ್ರಸಂಗ ಹುಟ್ಟುಹಾಕಲಿದೆ. ಈ ಕಾರಣದಿಂದ ಗುತ್ತಿಗೆದಾರರು ಹಾಗೂ ಸರ್ಕಾರಿ ಆಸ್ಪತ್ರೆಗಳ ವೈದ್ಯರು ಬೃಹತ್ ಪ್ರತಿಭಟನೆ ನಡೆಸಲಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಪ್ರತಿ ಬಾರಿ ವೈದ್ಯರು, ಆರೋಗ್ಯ ಸಿಬ್ಬಂದಿ ಮುಷ್ಕರ ಹೂಡಿ, ಪ್ರತಿಭಟನೆ ಮಾಡಿ, ಒಪಿಡಿ ಮುಚ್ಚಿ ತಮ್ಮ ಆಕ್ರೋಶ ವ್ಯಕ್ತಪಡಿಸಿದಾಗಲೂ ತೊಂದರೆ ಅನುಭವಿಸುವುದು ಬಡವರೇ. ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋಗುವವರು ಆರ್ಥಿಕವಾಗಿ ಸೋತವರು, ಹಣವಿಲ್ಲದೆ ನೋವು ಅನುಭವಿಸುವವರು. ಇವರ ದುಃಖ, ನೋವು, ಯಾತನೆ ಸರ್ಕಾರದ ಕಣ್ಣಿಗೂ ಬೀಳದಿರುವುದು ದುರಂತವೇ ಸರಿ, 'ಬಡವ ನೀ ಮಡಗಿದ ಹಾಗಿರು' ಎನ್ನುವ ಗಾದೆ ಸರ್ಕಾರಿ ಆಸ್ಪತ್ರೆಯ ಚಿಕಿತ್ಸೆಯನ್ನೇ ನೆಚ್ಚಿಕೊಳ್ಳುವವರಿಗೆ ಅತ್ಯಂತ ಸೂಕ್ತವಾಗಿ ಅನ್ವಯಿಸುತ್ತದೆ.

'ರಾಜ್ಯ ಸರ್ಕಾರ ಪ್ರತಿಭಟನೆಗೆ ಸ್ಪಂದಿಸಿ ಬೇಡಿಕೆಗಳನ್ನು ಈಡೇರಿಸದಿದ್ದರೆ ಮಾರ್ಚ್ 16ರಿಂದ ಆರೋಗ್ಯ ಇಲಾಖೆಯ ಎಲ್ಲಾ ವೈದ್ಯರು, ಅಧಿಕಾರಿ ನೌಕರರು ಕರ್ತವ್ಯಕ್ಕೆ ಅನಿರ್ದಿಷ್ಟಾವಧಿವರೆಗೆ ಗೈರುಹಾಜರಾಗುವ ಮೂಲಕ ಮುಷ್ಕರ ಮುಂದುವರೆಸುತ್ತೇವೆ' ಎಂದು ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಡಾ. ರವೀಂದ್ರನಾಥ್ ಎಂ.ಮೇಟಿ ಅವರು ಈಚೆಗೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದು ಬಡವರ್ಗಕ್ಕೆ 'ಗಾಯದ ಮೇಲೆ ಬರೆ' ಎಳೆದಂತಾಗಿದೆ.

ಒಪಿಡಿ ಎಂದರೆ ಹೊರರೋಗಿಗಳ ವಿಭಾಗ. ಇಲ್ಲಿ ರೋಗಿಗಳು ಆಸ್ಪತ್ರೆಗೆ ದಾಖಲಾಗದೆ ತಮ್ಮ ಕಾಯಿಲೆ ಬಗ್ಗೆ ತಜ್ಞ ವೈದ್ಯರ ಜೊತೆಗೆ ಸಮಾಲೋಚನೆ ನಡೆಸುತ್ತಾರೆ. ರೋಗ ನಿರ್ಣಯ ಪರೀಕ್ಷೆಗಳು, ಸೂಕ್ತ ಚಿಕಿತ್ಸೆ ಪಡೆಯುವುದು, ಅಗತ್ಯವಿದ್ದರೆ ಹೆಚ್ಚಿನ ಪರೀಕ್ಷೆಗಳಿಗೆ ನಿರ್ದೇಶಿಸುವುದು, ಬಳಿಕ ಮನೆಗೆ ಮರಳುವುದು ಈ ಹೊರರೋಗಿಗಳ ವಿಭಾಗದಲ್ಲಿ ನಡೆಯುವ ವಿದ್ಯಮಾನ. ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರಮುಖವಾಗಿ ಕಾರ್ಯನಿರ್ವಹಿಸುವ ಈ ಸೇವೆಯೇ ಜನತೆಗೆ ಅಲಭ್ಯವಾದರೆ ಬಡವರು ಪರದಾಡಬೇಕಾಗುತ್ತದೆ. ಸಿರಿವಂತರು ಸರ್ಕಾರಿ ಆಸ್ಪತ್ರೆಗೆ ಎಡತಾಕುವುದೇ ಇಲ್ಲ. ಇವರಿಗೆ ಒಪಿಡಿ ಬಂದ್ ಮಾಡಿದರೂ ಏನೂ ತೊಂದರೆಯಾಗುವುದಿಲ್ಲ.

ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಉಂಟಾಗಿದ್ದು ಕೂಡ ಆರೋಗ್ಯ ಕ್ಷೇತ್ರದಲ್ಲಿ ಎಲ್ಲವೂ ಸುಸೂತ್ರವಾಗಿಲ್ಲ ಎಂಬುದಕ್ಕೆ ಉದಾಹರಣೆ, ಅಲ್ಲದೆ ನೇಮಕಾತಿ ನಿಯಮಗಳನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ತಿದ್ದುಪಡಿ ಮಾಡಬೇಕು. ಆದರೆ, ಸರ್ಕಾರಿ ಆದೇಶ ಉಲ್ಲಂಘಿಸಿ 1973ರಿಂದ ಇಲ್ಲಿಯವರೆಗೆ ಆರೋಗ್ಯ ಇಲಾಖೆಯ ನೇಮಕಾತಿ ನಿಯಮಗಳನ್ನು ತಿದ್ದುಪಡಿ ಮಾಡಿಲ್ಲ. ಈ ಬಗ್ಗೆ ಶೀಘ್ರ ತಿದ್ದುಪಡಿ ಮಾಡಬೇಕು ಎಂಬುದನ್ನು ಕೂಡ ಸರ್ಕಾರ ಗಮನದಲ್ಲಿಡಬೇಕಾಗಿದೆ.

'ವೈದ್ಯಕೀಯ ಕ್ಷೇತ್ರ ಹಣವಂತರ ಕಪಿಮುಷ್ಟಿಯಲ್ಲಿದೆ' ಎಂದು ಖ್ಯಾತ ಹೃದ್ರೋಗ ತಜ್ಞ ಡಾ. ದೇವಿ ಶೆಟ್ಟಿ ಅವರು ಹಿಂದೊಮ್ಮೆ ಹೇಳಿರುವುದನ್ನು ಇಲ್ಲಿ ಉಲ್ಲೇಖ ಮಾಡಬಹುದು. ಏಕೆಂದರೆ ಬಹುಕಾಲದಿಂದ ಕೇಳಿ ಬರುತ್ತಿರುವ ಆಕ್ಷೇಪವಿದು. ಆರೋಗ್ಯ ಕ್ಷೇತ್ರದ ಕಹಿವಾಸ್ತವ ಪ್ರಸ್ತುತ ಸ್ಪಷ್ಟವಾಗಿ ಕಣ್ಣಿಗೆ ರಾಚುತ್ತಿದೆ.

ಅನಾರೋಗ್ಯ ಯಾವಾಗಲೂ ಹೇಳಿ ಕೇಳಿ ಬರುವುದಿಲ್ಲ. ನಿನ್ನೆ ಚೆನ್ನಾಗಿಯೇ ಇದ್ದವರಿಗೆ ಇಂದು ಧುತ್ತೆಂದು ಆರೋಗ್ಯ ಸಮಸ್ಯೆ ಕಾಡಬಹುದು. ಅನಾರೋಗ್ಯ ಕಾಡಿದಾಗ ಬಡರೋಗಿಯ ಮನಸ್ಥಿತಿ ಹೇಗಿರುತ್ತದೆ? ಸಾವಿನ ಭಯವೂ ಅವರನ್ನು ಕಾಡಬಹುದು. ಆ ಭಯ ಮನೆಯವರನ್ನೂ ಕಾಡುತ್ತದೆ. ಹೇಗಾದರೂ ಮಾಡಿ ನಮ್ಮ ಬಂಧುವನ್ನು, ಪ್ರೀತಿಪಾತ್ರರನ್ನು ಬದುಕಿಸಿಕೊಡಿ ಎಂದು ವೈದ್ಯರ ಬಳಿ ಗೋಗರೆಯುತ್ತಾರೆ. 'ಹೇಗಾದರೂ ಮಾಡಿ...' ಎಂಬ ಪದಗಳನ್ನು ಹೇಳುವಾಗ ಆ ಮಾತುಗಳಲ್ಲಿ ಎಷ್ಟೊಂದು ಅಸಹಾಯಕತೆ ಅಡಗಿರುತ್ತದೆ. ಆ ಅಸಹಾಯಕತೆಯನ್ನು ಹಣವನ್ನಾಗಿ ಪರಿವರ್ತಿಸುವ ದಂಧೆಯೊಂದು ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿ ಎದ್ದುಕಾಣುತ್ತದೆ. ಹೀಗಾಗಿ ಬಡವರು ಖಾಸಗಿ ಆಸ್ಪತ್ರೆ ಕಡೆ ಹೋಗಲು ಹಿಂಜರಿಯುತ್ತಾರೆ.

ಸರ್ಕಾರ ವೈದ್ಯರ ಬೇಡಿಕೆ ಈಡೇರಿಸುವುದು ಅನಿವಾರ್ಯ. ಸರ್ಕಾರ ಬಡವರ್ಗದ ಪರ ನಿಲ್ಲಬೇಕಾದರೆ, ಸರ್ಕಾರಿ ವೈದ್ಯರು ಸಲ್ಲಿಸುವ ಬೇಡಿಕೆಗಳಿಗೆ ಸ್ಪಂದಿಸಬೇಕು. 'ಬಡವ ಮಾಡಿದರೆ ಅನ್ಯಾಯ, ಬಲ್ಲಿದ ಮಾಡಿದರೆ ಆದಾಯ' ಎಂಬ ಮಾತಿನಲ್ಲಿರುವ ಹುರುಳಿನ ಕಡೆ ಹೊರಳುನೋಟ ಹರಿಸಬೇಕು. ಮುಷ್ಕರ ನಡೆಯುವುದನ್ನು ತಪ್ಪಿಸಿ ಬಡವರ ಪರ ನಿಲ್ಲಬೇಕು. ಆಗ ಮಾತ್ರ ಸಮಾಜವೂ 'ಆರೋಗ್ಯಪೂರ್ಣ'ವಾಗಿ ಇರುತ್ತದೆ.

■ ಉಮಾ ಅನಂತ್